"ಎಷ್ಟು ಮಾಡ್ಬೇಕ್ರಿ ಭಕ್ರಿ?..."

"ಒಂದ್ ಎಂಟು ಮಾಡ್ರಿ. ಸ್ವಲ್ಪ ತೆಳ್ಳಗೆ ಮಾಡ್ರಿ.... ಸುನಂದಾಬಾಯಿ. ನಿನ್ನೆ ಎಷ್ಟು ದಪ್ಪ ಮಾಡಿಟ್ಟೀರಿ. ನನ್ನ ಮಗ ಊಟಾನೇ ಮಾಡಿಲ್ಲ. ಹಿಂಗ್ ಮಾಡಿದ್ರ ನಡೆದಿಲ್ಲ ನೋಡ್ರಿ" ಅಂತ ಸ್ವಲ್ಪ ಖಡಕ್ ಆಗಿಯೇ ಹೇಳಿದರು ರಾಧಾಬಾಯಿ.

"ಆಗತಾವ್ರೀ... ನಮಗೂ ಎಲ್ಲಾ ದಿನ ಮೂಡ್ ಇರಂಗಿಲ್ಲ. ಬೇಕಿದ್ದರೆ ಮಾಡಿಸಿಕೋರಿ. ಇಲ್ಲಂದ್ರ ಬಿಡ್ರಿ" ಎಂದು ಕಡ್ಡಿ ಮುರದಂಗ ಹೇಳಿ ಗಸ ಗಸ ಜೋಳದ ಹಿಟ್ಟಿಗೆ ಎಸರು ಹಾಕಿ ನಾದ ತೊಡಗಿದ್ದಳು. ಮುಖ ವ್ಯಗ್ರವಾಗಿತ್ತು. ಮನದ ಸಿಟ್ಟು ಕೈಗೂ ಬಂದಿತ್ತು. ಹಂಚನ್ನು ಗ್ಯಾಸಿನ ಒಲೆಯ ಮೇಲೆ ಇಟ್ಟು ಟಪಾ ಟಪಾ ಎಂದು ದಿನಕಿಂತ ಸ್ವಲ್ಪ ಜೋರಾಗಿಯೇ ಹಿಟ್ಟನ್ನು ಬಡೆಯುತ್ತಿದ್ದಂತೆ ತೆಳ್ಳಗಿನ ಗುಂಡಾದ ಭಕ್ರಿ ಮೂಡುತ್ತಿತ್ತು.

ಯಾಕೋ ಆಸಾಮಿ ಗರಂ ಆಗಿದೆ ಅಂತ ತಿಳಿದು ರಾಧಾಬಾಯಿ ಸ್ವಲ್ಪ ಮೆತ್ತಗಾಗಿ, "ಯಾಕ್ರೀ... ಸುನಂದಾಬಾಯಿ ಮೂಡಿಲ್ಲೇನು?... ಏನಾಗ್ಯದ?" ಎಂದು ಕೇಳಿದಕ್ಕೆ "ಏನಾಗ್ತದ... ಸುಡಗಾಡು. ಹೊಟ್ಟಿಪಾಡು..." ಏನನ್ನೂ ಹೇಳದೆ ಸುಮ್ಮನಾದಳು.

ರಾಧಾಬಾಯಿ ಅವಳನ್ನು ಕೆಣಕದೆ ಇನ್ನೊಂದು ಒಲೆಮೇಲೆ ಕುಕ್ಕರ್ ಇಡುವಾಗ, "ವೈನಿ, ನಿಂಬಿಹಣ್ಣಿದ್ರ ಸ್ವಲ್ಪ ಶರಬತ್ತು ಮಾಡ್ರಿ" ಎಂದಳು. ದನಿಯಲ್ಲಿ ಇನ್ನೂ ಅಸಹನೆ ಇತ್ತು. ರಾಧಾಬಾಯಿ ಮರುಮಾತಿಲ್ಲದೆ ತಣ್ಣನೆಯ ನೀರಲ್ಲಿ ಶರಬತ್ತು ಮಾಡಿದರು.

ಭಕ್ರಿ ಮುಗಿಸಿದ ರಾಧಾಬಾಯಿಗೆ, "ಕೂಡಬರ್ರಿ... ಭಕ್ರಿಮನಿ ಮುಗದವಾ ಇನ್ನೂ ಹೋಗಬೇಕಾ?..." ಎಂದು ಕೇಳುತ್ತ ಶರಬತ್ತಿನ ಲೋಟ ಮುಂದಿಟ್ಟರು.

ಸುನಂದಾಬಾಯಿ ಒಂದು ಗುಟುಕು ಕುಡದು, "ಸ್ವಲ್ಪ ಐಸ್ ಹಾಕೊತೀನ್ರಪಾ" ಎಂದು ಫ್ರೀಜರ್‌ನಲ್ಲಿಯ ಐಸ್ ಟ್ರೇಯಿಂದ ಐಸ್ ಪೀಸ್‌ಗಳನ್ನು ತನ್ನ ಲೋಟಕ್ಕೆ ಹಾಕಿಕೊಳ್ಳುತ್ತಾ ನಿಮಗೂ ಬೇಕೇನ್ರಿ ಎಂದು ಕೇಳಿದಳು. ರಾಧಾಬಾಯಿ ಬ್ಯಾಡವಾ ಎನ್ನುತ್ತಿದ್ದಂತೆ ತಾನು ಇನ್ನೂ ಎರಡು ಪೀಸ್ ಹಾಕಿಕೊಂಡು ಕುಳಿತು ಕುಡಿಯ ತೊಡಗಿದಳು. ಇಂತಹ ಸಲುಗೆ ಆಕೆ ಎಲ್ಲರ ಮನೆಯಲ್ಲಿಯೂ ಮಾಡತ್ತಿದ್ದಳು. ನಿತ್ಯದ ಸಾವಿಗೆ ಅಳುವವರಾರು ಅನ್ನುವಂತೆ ಅಡುಗೆ ಮಾಡುವವರಿಗೆ ಆದರಿಸಿ ಚಹಾ ಪಾನಕಾ ಕೇಳೋರು ಯಾರು, ತಾವೇ ಬಾಯಿ ತೆರದು ಚಾಹಾ ಮಾಡ್ರಿ ಅಂತಲೋ ಚಾಪುಡಿ ಸಕ್ರಿ ಹಾಲು ಕೊಡ್ರಿ, ಚಹಾ ಮಾಡ್ಕೊತ್ತೀವಿ ಅಂತ ಛಿಡೆ ಇಲ್ಲದ ಬೀಗರಂತೆ ಕೇಳಬೇಕಾಗ್ತದ. ಶರಬತ್ತಿನ ಒಂದೊಂದು ಗುಟುಕು ಉದರಕ್ಕೆ ಇಳಿಯುತ್ತಿದ್ದಂತೆ ಸುನಂದಾಬಾಯಿ ಸಿಟ್ಟು ನಿಧಾನವಾಗಿ ತಣ್ಣಗಾಗುತ್ತಾ ಮಾತನಾಡುವ ಮೂಡು ಬಂತು.

"ಇನ್ನೂ ಎರಡು ಮನೆಯವ. ಈ ಬ್ಯಾಸಿಗಿ ದಿವಸಕ್ಕ ಕೆಲಸ ಹರಿಯಂಗಿಲ್ಲ. ದೂರದ ಮನೆಗಳು. ನಡಕೋತ ಹೋಗಬೇಕು. ಮ್ಯಾಲೆ ಬಿಸಿಲು, ಭಕ್ರಿ ಚಪಾತಿ ಮುಗದರ ಸಾಕಪ್ಪಾ ಅಂತ ನಮಗ, ನೀವು ಚಪಾತಿ ಹಂಗಾದವು ಭಕ್ರಿ ಹಿಂಗಾದವು ಅಂತ ಗೋಜು ಹಾಕ್ತೀರಿ. ನಮ್ಮಂಥ ಕಷ್ಟ ಯಾರಿಗೂ ಬರಬಾರದು" ಎಂದಳು. ಅದಕ್ಕ ರಾಧಾಬಾಯಿ, "ಖರೆಯದವ್ವ, ಆಟೋಕ್ಕ ಹೋಗಿ ಬಂದು ಮಾಡು..." ಅಂದರು.

"ಹೂಂ, ನೀವು ನನ್ನ ಪಗಾರ ಹೆಚ್ಚ್ ಮಾಡ್ರಿ, ಆಗ ಆಟೊಕಲ್ಲ... ಟ್ಯಾಕ್ಸಿಯೊಳಗೇ ಬಂದು ಹೋಗ್ತೀನಿ" ಎಂದು ಘಟ್ಟಿಸಿ ಹೇಳುತ್ತ ಲೋಟದ ಕೊನೆಯಲ್ಲಿ ಉಳಿದ ಐಸ್ ಪೀಸನ್ನು ಬಾಯಿಗೆ ಹಾಕಿಕೊಂಡಿದ್ದರಿಂದ ನಾಲಿಗೆ ದಪ್ಪವಾಗಿ ತೊದಲು ದನಿಯಲ್ಲಿ, "ಇದೆಲ್ಲ ಆಗಹೋಗ ಮಾತಲ್ಲ ಏನಲ್ಲ, ಸುಮ್ಮ ಒಣ ಮಾತೇ" ಎಂದು ಗೊಣಗಿದಳು.

ಶರಬತ್ತಿನ ಲೋಟತೊಳೆದಿಡುತ್ತ, "ನಾಳೆ ಬರಲ್ಯೋ ಬ್ಯಾಡೊ ಮೊದಲೇ ಹೇಳ್ರಿ" ಎಂದು